
ಡಾ. ಮೆಗನ್ ಎ. ಕ್ಲಾರ್ಕ್


ಡಾ.ಜೆ. ಕರುಗ್ನೋ

## ಆದ್ಯತೆಯ ಕೆಲಸಗಳು

ಮರುದಿನ 8 ಜುಲೈ, ನಿಲ್ಲುತ್ತದೆ ಅಂದುಕೊಂಡಿದ್ದ ರಕ್ತಸ್ರಾವ ಹೆಚ್ಚಿತು. ತಹಬದಿಗೆ ತಂದು ಕೆಲಸದಲ್ಲಿ ತೊಡಗಿದ್ದ ಮನಸ್ಸು ಮತ್ತೆ ತಳಮಳಗೊಂಡಿತು.

ನಿಜ, ಕ್ಯಾನ್ಸರ್‌ನಾಚೆಗೆ ಇಂತಹ ರಕ್ತಸ್ರಾವಕ್ಕೆ ಅನೇಕ ಕಾರಣಗಳುಂಟು ಎಂದು ವೈದ್ಯಕೀಯ ಪ್ರಬಂಧಗಳು ತಿಳಿಸಿದ್ದವು:

- ಗರ್ಭಕೋಶದ ಒಳಪದರು ತೀರಾ ತೆಳುವಾಗಿ ಮತ್ತು ನಿರ್ಜಲವಾಗಿರುವುದೂ ಕಾರಣವಾಗಬಲ್ಲದು.
- ಹಾರ್ಮೋನ್ ರಿಪ್ಲೇಸ್‌ಮೆಂಟ್ ಥೆರಪಿ.
- ಎಂಡೊಮೆಟ್ರಿಯಲ್ ಹೈಪರ್‌ಪ್ಲಾಸಿಯ – ಈ ಸ್ಥಿತಿಯಲ್ಲಿ ಗರ್ಭಕೋಶದ ಒಳಪದರು ಅಸಹಜ ಕೋಶಗಳ ಬೆಳವಣಿಗೆಯಿಂದ ತೀರಾ ದಪ್ಪಗಾಗಿರುತ್ತದೆ.
- ‘ಸರ್ವಿಸೈಟಿಸ್’ ಅಥವಾ ‘ಎಂಡೊಮೆಟ್ರೈಟಿಸ್’ – ಅಂದರೆ ಗರ್ಭದ್ವಾರದಲ್ಲಿ ಅಥವಾ ಗರ್ಭಕೋಶದ ಒಳಪದರದಲ್ಲಿ ಸೋಂಕು (ಇನ್‌ಫೆಕ್ಷನ್) ಅಥವಾ ಉರಿಯೂತ (ಇನ್‌ಫ್ಲಮೇಶನ್)

## 10 ಜುಲೈ 2023 ವೈದ್ಯರ ಭೇಟಿ

ಇಂದು ಸೋಮವಾರ, ಡಾ.ನಳಿನಿ ಅವರನ್ನು ಭೇಟಿಯಾಗಲು ಖಾಲಿ ಹೊಟ್ಟೆಯಲ್ಲಿಯೇ ಹೊರಟಿದ್ದೆ, ಯಾವುದಾದರೂ ಪರೀಕ್ಷೆಗೆ ಒಳಪಡಬೇಕಿದ್ದರೆ ಇದು ಸೂಕ್ತ ಅನಿಸಿತ್ತು.

ಡಾ. ನಳಿನಿ ಅವರ ಭೇಟಿ, ಅವರ ಪರೀಕ್ಷೆಯ ನಂತರ ಅಲ್ಟ್ರಾಸೋನೊಗ್ರಫಿಗೆ ಹೋಗಲು ಹೇಳಿದರು. ಚೆನ್ನಾಗಿ ನೀರು ಕುಡಿದು ಮೊದಲ ಮಹಡಿಗೆ ಬಂದೆ. ಅಲ್ಲೆಲ್ಲಾ ಚಿಕ್ಕ ವಯಸ್ಸಿನ ಗರ್ಭಿಣಿ ಹೆಣ್ಣುಮಕ್ಕಳು, ಬದುಕಿನ ಸಂಭ್ರಮದ ಕ್ಷಣದಲ್ಲಿ ಅವರಿದ್ದರು. ಅವರ ನಡುವೆ ನಾನು ಕುಳಿತೆ. ಸರದಿ ಬಂತು, ಸೋನೊಲಜಿಸ್ಟ್ ವೈದ್ಯರ ಪರೀಕ್ಷಣಾ ಮೇಜಿನಲ್ಲಿ ನಾನು ಮಲಗಿದೆ. ಸೋನೊಗ್ರಫಿ ಬರೀ ಹೊರಗಿನಿಂದ ಮಾತ್ರವಾಗಿರಲಿಲ್ಲ. ಶೋಧಕ ನಳಿಕೆ ಗರ್ಭಕೋಶದ ಒಳಗೆ ಪ್ರವೇಶಿಸಿ ಒಳಗಿನಿಂದ ಪರೀಕ್ಷಿಸಿತು. ಸ್ವಲ್ಪ ಹೊತ್ತಿಗೆ ರಿಪೋರ್ಟ್ ಕೈಗೆ ಬಂದಿತು, ಡಾ. ನಳಿನಿ ಅವರಲ್ಲಿಗೆ ಮತ್ತೆ ಬಂದೆ.

‘ನಿಮ್ಮ ಗರ್ಭಾಶಯದ ಒಳ ಪದರು ಎಂಡೊಮೆಟ್ರಿಯಮ್ ಬಹಳ ದಪ್ಪವಿದೆ, 9.2 ಮಿ.ಮಿ.’ ಅವರು ಹೇಳಿದರು. ಮುಟ್ಟು ನಿಂತ ಮಹಿಳೆಯರಲ್ಲಿ ಎಂಡೊಮೆಟ್ರಿಯಮ್ 5 ಮಿ.ಮಿ. ಒಳಗೆ ಇರಬೇಕು. ಅದನ್ನು ನಾರ್ಮಲ್ ಎಂದು ಪರಿಗಣಿಸಲಾಗುತ್ತದೆ.

‘ಒಂದು ಬಯಾಪ್ಸಿ ಮಾಡಬೇಕಿದೆ, ಅಡ್ಮಿಟ್ ಆಗಬೇಕಿಲ್ಲ. ಓಪಿಡಿ ಪ್ರೊಸೀಜರ್. ಈಗಲೇ ಮಾಡಲೆ, ಮತ್ತೆ ಬರುವಿರಾ?’ ಎಂದು ಕೇಳಿದರು. ‘ಈಗಲೇ ಮಾಡಿಬಿಡಿ’ ನಾನು ಹೇಳಿದೆ. ಬಯಾಪ್ಸಿಗೆ ಗರ್ಭಾಶಯದ ಒಳಪದರಿನ ಒಂದಿಷ್ಟು ಅಂಗಾಂಶವನ್ನು ತೆಗೆದು, ಪ್ರಯೋಗಶಾಲೆಗೆ ಕಳುಹಿಸಲಾಗುತ್ತದೆ. ಅಲ್ಲಿ ಸೂಕ್ಷ್ಮದರ್ಶಕದಡಿ ಅದನ್ನು ಪರೀಕ್ಷಿಸಲಾಗುವುದು.

ಸ್ವಲ್ಪ ಸಮಯದ ನಂತರ ಮತ್ತೆ ಸೋನೊಗ್ರಫಿ ಮೇಜಿನ ಮೇಲೆ ಮಲಗಿದ್ದೆ. ಕಂಪ್ಯೂಟರ್ ಪಟಲದ ಮೇಲೆ ಮೂಡಿದ ಸೋನೊಗ್ರಫಿ ಚಿತ್ರದ ಮಾರ್ಗದರ್ಶನದಲ್ಲಿ, ಡಾ. ನಳಿನಿಯವರ ಕುಶಲ ಕೈಯಲ್ಲಿದ್ದ ‘ಪಿಪೆಲ್’ ಎಂಬ ‘ಶೋಧಕ ಕೊಳವೆ’ ಗರ್ಭಾಶಯದ ಒಳಗೆ ಪ್ರವೇಶಿಸಿ ಎಂಡೊಮೆಟ್ರಿಯಮ್‌ನಿಂದ ಒಂದಿಷ್ಟು ಅಂಗಾಂಶವನ್ನು ಕೆರೆದು ಹೊರತೆಗೆದಿತ್ತು.

## ಹಿಂದಣ ನೋಟ

ಮನೆಗೆ ಬಂದು ಸಮಾಧಾನವಾಗಿ ಕುಳಿತಂತೆ, ಥಟ್ಟನೆ ಕಳೆದ ತಿಂಗಳ ಕಿವಿನೋವು ನೆನಪಾಯಿತು. ಗಂಟಲು ಕೆರೆತ, ಒಂದಿಷ್ಟು ಒಣಕೆಮ್ಮು ಕಾಡಿತ್ತು. 25 ಜೂನ್ ಬೆಳಗ್ಗೆ, ಬಹಳಷ್ಟು ಅನುಭವಿ ಹಿರಿಯ ವೈದ್ಯರಾದ ಡಾ. ಸುಬ್ಬಯ್ಯ (ಹೆಸರು ಬದಲಿಸಿದೆ) ಅವರ ಬಳಿಗೆ ಹೋಗಿದ್ದೆ.

‘ಇಂಜೆಕ್ಷನ್ ತಗೊಳ್ಳಿ’ ಅವರು ಹೇಳಿದ್ದರು, ಅಲ್ಲಿಯೇ ಬಗಲಲ್ಲಿ ವೈದ್ಯರ ಮೆಡಿಕಲ್ ಶಾಪ್ ಕೂಡ ಇದ್ದ ಕಾರಣ ಮರುಕ್ಷಣ ಇಂಜೆಕ್ಷನ್ ಪ್ರತ್ಯಕ್ಷವಾಗಿತ್ತು, ತೋಳಿಗೆ ಹೋಗಿತ್ತು. ಅದೆಲ್ಲೋ ಆಂಟಿಬಯಾಟಿಕ್ ಇದ್ದಿರಬೇಕು ಎಂದುಕೊಂಡು ಇನ್ನು ಬೇಗನೇ ಎಲ್ಲವೂ ನಿಯಂತ್ರಣಕ್ಕೆ ಬರುತ್ತೆ ಅಂದುಕೊಂಡಿದ್ದೆ. ಆದರೆ ಡಾ. ಸುಬ್ಬಯ್ಯ ಅವರ ಇಂಜೆಕ್ಷನ್ ಆಗಲಿ, ಗುಳಿಗೆಗಳಾಗಲಿ ಕೆಲಸ ಮಾಡಿರಲಿಲ್ಲ. ಮತ್ತೆ ಮೂರು ದಿನ

